ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆಳಗೊಳ ಹಾಗೂ ಕೆ.ಆರ್.ಎಸ್. ಈ ಕಾಲೇಜುಗಳ ಕಟ್ಟಡ ಕಾಮಗಾರಿಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ವಹಿಸಲಾಗಿದ್ದು, ಸದರಿ ಇಲಾಖೆಯು ಅಂದಾಜು ಪತ್ರಿಕೆಗಳನ್ನು ಸಿದ್ದಪಡಿಸಿ ಸಲ್ಲಿಸಬೇಕಾಗಿರುತ್ತದೆ. ಅಲ್ಲದೆ ಲೋಕೋಪಯೋಗಿ ಇಲಾಖೆಯ ಅನುದಾನದ ಕೋರಿಕೆಯನ್ನಾದರಿಸಿ ಬಿಡುಗಡೆ ಕ್ರಮ ಕೈಗೊಳ್ಳಲಾಗುವುದು.

ಇ) ಅನುದಾನ ಲಭ್ಯತೆಯನ್ನಾದರಿಸಿ ಕ್ರಮ ಕೈಗೊಳ್ಳಲಾಗುವುದು.

ಈ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ವಹಿಸಲಾಗಿದೆ. ಕಾಮಗಾರಿಗಳ ಪ್ರಗತಿಯನ್ನಾದರಿಸಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ಸಾಲಿನಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. ಆದ್ದರಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಡೆಂಗ್ಯೂ ಪ್ರಕರಣಗಳು

9 (57)

ಡಾ॥ ಬಗಲಿ ಸಾರ್ಮಭೌಮ ಸಾತಗೌಡ (ಇಂಡಿ)

ಅ) ವಿಜಾಪುರ ಜಿಲ್ಲೆಯಲ್ಲಿ ಡೆಂಗ್ಯೂ ಶಂಕಿತ ಪ್ರಕರಣಗಳ ಸಂಖ್ಯೆ ಎಷ್ಟು; ಖಚಿತಪಡಿಸಿದ ಪ್ರಕರಣಗಳೆಷ್ಟು; ಎಷ್ಟು ಪ್ರಕರಣಗಳಲ್ಲಿ ಸಾವು ಸಂಭವಿಸಿದೆ;(ವಿವರ ನೀಡುವುದು);

ಆ) ವಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ Platelet ಗಳನ್ನು ಎಣಿಸುವ ವ್ಯವಸ್ಥೆ ಇದೆ; ಯಾವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು

ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಈ ವ್ಯವಸ್ಥೆ ಇರುವುದಿಲ್ಲ; (ವಿವರ ನೀಡುವುದು) ;

ಇ) ವಿಜಾಪುರ ಜಿಲ್ಲೆಯಲ್ಲಿ ಯಾವ ಯಾವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ Cell counter ಲಭ್ಯವಿದೆ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2012ನೇ ಸಾಲಿನಲ್ಲಿ ದಿನಾಂಕ: 27–11–212 ರವರೆಗೆ ವಿಜಾಪುರ ಜಿಲ್ಲೆಯಲ್ಲಿ ಡೆಂಗ್ಯೂ ಶಂಕಿತ, ಖಚಿತ ಮತ್ತು ಮರಣ ಪ್ರಕರಣಗಳ ವಿವರ ಈ ಕೆಳಕಂಡಂತಿದೆ;

ಶಂಕಿತ ಪ್ರಕರಣಗಳು	ಖಚಿತ ಪ್ರಕರಣಗಳು	ಖಚಿತ ಮರಣ ಪ್ರಕರಣಗಳು
522	39	01

ಜಿಲ್ಲೆಯಲ್ಲಿ ಒಂದು ಶಂಕಿತ ಮರಣ ಪ್ರಕರಣ ವರದಿಯಾಗಿದ್ದು ಅದರ ವಿವರ ಕೆಳಕಂಡಂತಿದೆ;

'ಶ್ರೀನಿವಾಸ ಮಲ್ಲಣಗೌಡ ಬಿರಾದಾರ, ವಯಸ್ಸು–3ವರ್ಷ, ಹೂವಿನ ಹಿಪ್ಪರಗಿ, ತಾಲ್ಲೂಕು: ಬಸವನ ಬಾಗೇವಾಡಿ, ಮರಣ ಹೊಂದಿದ ದಿನಾಂಕ: 28–9–2012, ಮರಣ ಹೊಂದಿದ ಸ್ಥಳ: ಅಶ್ವಿನಿ ಆಸ್ಪತ್ರೆ, ಸೋಲಾಪುರ.'

ಆ) ಜಿಲ್ಲೆಯ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ Platelet ಗಳನ್ನು ಎಣಿಸುವ ವ್ಯವಸ್ಥೆ ಇರುವುದಿಲ್ಲ.

ಇ) ಜಿಲ್ಲೆಯ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ Cell counter ಲಭ್ಯವಿರುವುದಿಲ್ಲ.